# ಗ್ರಾಮ ಪಂಚಾಯಿತಿ ಕಾರ್ಯಾಲಯ , ಅಮರಾಪೂರ

ದೇವದುರ್ಗ (ತಾ) ರಾಯಚೂರು (ಜಿ) ದಿನಾಂಕ :

ಉಲ್ಲೇಖ ಸಂ

ಗೆ,

ಶ್ರೀ ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ.ವಿಧಾನ ಸೌಧ,ಬೆಂಗಳೂರು,

ವಿಷಯ :ಗ್ರಾಮ ಪಂಚಾಯತಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೇ ಚುನಾವಣೆ ನಡೆಯುವವರೆಗೆ ಮುಂದುವರೆಸುವ ಬಗ್ಗೆ ಒತ್ತಾಯಿಸಿ ಪತ್ರ.

ಇಡೀ ದೇಶಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್ -19ರ ಪರಿಣಾಮ ಕರ್ನಾಟಕದ ಮೇಲೂ ಆಗಿರುವದರಿಂದ ರಾಜ್ಯದಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ವಿವಿಧ ರೀತಿಯ ಬದಲಾವಣೆಗಳಾಗಿವೆ. ಇದರ ಪರಿಣಾಮ,ಕರ್ನಾಟಕದಲ್ಲಿ, ಇದೇ ಮೇ ತಿಂಗಳ ಅಂತ್ಯದೊಳಗೆ ನಡೆಯಬೇಕಿದ್ದ ಗ್ರಾಮ ಪಂಚಾಯತ್ ಚುನಾವಣೆ ಮೇಲೂ ಉಂಟಾಗಿದೆ.ಈ ಕೋವಿಡ್-19ರ ಸಂಕಷ್ಟದ ಸಮಯಲ್ಲಿ ಚುನಾವಣೆಯಂತಹ ಕಾರ್ಯವನ್ನು ಕೈಗೆತ್ತಿಕೊಳ್ಳುವುದು ಅಸಾಧ್ಯವೇಸರಿ.ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಹೇಳಿರುವಂತ ಸುಮಾರು 6 ತಿಂಗಳುಗಳ ಕಾಲ ಚುನಾವಣೆ ಮುಂದುಡಬೇಕಾಗಿರುವುದು ಅನಿವಾರ್ಯವಾಗಿದೆ.ಆದರೆ ಆಡಳಿತಾಧಿಕಾರಿಯ ನೇಮಕ ಅಥವಾ ಬೇರ್ಯಾವುದೋ ಉಸ್ತುವಾರಿ ಸಮಿತಿ ನೇಮಕ ಮಾಡುವ ಸರ್ಕಾರದ ಆಲೋಚನೆ ಕಾನೂನಿನಲ್ಲಿ ಹಾಗೂ ಅಧಿಕಾರಿಗಳು ಸರ್ಕಾರದ ರಥದ ಎರಡು ಗಾಲಿಗಳಿದ್ದಂತೆ, ಸರ್ಕಾರದರಥ ಮುನ್ನಡೆಯುವಲ್ಲಿ ಇಬ್ಬರ ಪಾತ್ರವು ಬಹಳ ಪ್ರಮುಖವಾದುದು,ಗ್ರಾಮ ಪಂಚಾಯತ ಒಂದು ಸ್ಥಳೀಯ ಸ್ವಯಂ ಸರ್ಕಾರ,ಹೀಗಾಗಿಯೇ ಇಡೀ ರಾಜ್ಯಾದ್ಯಂತ ಕೋವಿಡ್-19ರ ಪರಿಸ್ಥಿತಿ ಘೋಷಣೆಯ ಆದಾಗ ಮೊಟ್ಟಮೊದಲು ಸರ್ಕಾರ ಮಾಡಿದ ಕೆಲಸವೆಂದರೆ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ ಸ್ವಯಂ ಸೇವಾ ಸಂಸ್ಥೆಗಳ ಸ್ವಯಂ ಸೇವಕರ ಸಂಯೋಜನೆಯಲ್ಲಿ ಜಾರಿಪಡೆ(ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತನ ವಿಕೋಪ ನಿರ್ವಾಹಣೆಯ ಜವಾಬ್ದಾರಿಯ ನೇತೃತ್ವವನ್ನು ಗ್ರಾಮ ಸರ್ಕಾರಕ್ಕೆ ನೀಡಿದ್ದು. ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸಿ ಅನುಭವ ಪಡೆದು ಗ್ರಾಮ ಪಂಚಾಯತ್ ಅಭಿವೃದ್ದಿಯಲ್ಲಿ ತಮ್ಮ ಪಾತ್ರಜವಾಬ್ದಾರಿಗಳ ಮಹತ್ವವನ್ನು

Scanned with CamScanner

ಆಳವಾಗಿ ಅರ್ಥೈಸಿಕೊಂಡಿದ್ದರಿಂದ ವಿಕೋಪ ಪರಿಸ್ಥಿತಿಯನ್ನೂ ಸಹಾ ನಿಭಾಹಿಸಲು ಸ್ಥಳಿಯ ಸರ್ಕಾರವಾಗಿ ನಮಗೆ ಸಾದ್ಯವಾಯಿತು.ಈ ಸಂಧರ್ಬದಲ್ಲಿ ಗ್ರಾಮೀಣ ಜನರ ಅಗತ್ಯತೆಗಳೇನು ಇಲ್ಲಿನ ಪರಿಸ್ಥಿತಿ ಹೇಗಿದೆ,ಆಗಬೇಕಾದ ಪ್ರಮುಖ ಕಾರ್ಯಗಳೇನು ಮುಂದಿರುವ ಸವಾಲುಗಳೇನು ಎಂಬುದನ್ನು ಕೂಲಂಕುಷವಾಗಿ ಗಮನಿಸಿದ್ದೇವೆ. ಒಂದು ರೀತಿಯ ತುರ್ತು ಪರಿಸ್ಥಿತಿಯಂತೆ ಇರುವ ಈ ಸಮಯದಲ್ಲಿ ನಾವು ಸ್ಥಳಿಯ ಸರ್ಕಾರದ ಅವಿಭಾಜ್ಯ ಅಂಗವಾಗಿ ವಿಕೋಪವನ್ನು ಸಮರ್ಥವಾಗಿ ನಿಭಾಹಿಸುವಲ್ಲಿ ಜನರ ಸಂಕಷ್ಟಗಳಿಗೆ ಸ್ಪಂಧಿಸುವಲ್ಲಿ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತೇವೆ,ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗ ಒಗ್ಗೂಡಿ ಆಡಳಿತ ನಡೆಸಿರುವದೇ ಈ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಪ್ರಮುಖ ಕಾರಣ.ಈ ವಿಕೋಪದ ಪರಿಸ್ಥಿತಿ ಇನ್ನು ಮುಂದುವರಿಯುತ್ತಿರುವ ಈ ಸವಾಲಿನ ಸಮಯಲ್ಲಿ ಪಂಚಾಯತ್ ಆಡಳಿತಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾ ಉಸ್ತುವಾರಿ ಸಮಿತಿಯ ನೇಮಕ ಅಸಂಜಸವಾದುದ್ದು ತಮ್ಮ ಸರ್ಕಾರದ ಈ ಆಲೋಚನೆ ನಿರ್ದಾರವನ್ನು ತಕ್ಷಣವೇ ಕೈಬಿಟ್ಟು ಪ್ರಸ್ತುತ ಇರುವ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಸ್ಥಳಿಯ ಸರ್ಕಾರವನ್ನೇ ಮದ್ಯಂತರ ಸ್ಥಳಿಯ ಸ್ವಯಂ ಸರ್ಕಾರವಾಗಿ ಮುಂದುವರೆಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಮ್ಮ ಪಂಚಾಯತನ ಸಾಮಾನ್ಯ ಸಭೆಯ ನಿರ್ಣಯವನ್ನು ಮಂಡಿಸುತ್ತಿದ್ದೇವೆ.ಇದೇ ಪಂಚಾಯತನ ಜನರಿಂದ ಚುನಾಯಿತರಾದ ನಾವು ಸ್ಥಳಿಯ ಸರ್ಕಾರದ ಭಾಗವಾಗಿ ನಮ್ಮ ಗ್ರಾಮದ ಜನರಿಗೆ ಗ್ರಾಮದ ಅಭಿವೃದ್ಧಿಗೆ ಬದ್ದರಾಗಿದ್ದೇವೆ.

ಗ್ರಾಮ ಪಂಚಾಯತ್ ಅದ್ಯಕ್ಷರು,ಉಪಾದ್ಯಕ್ಷರು ಹಾಗೂ ಸರ್ವ ಸದಸ್ಯರು ಅಮರಾಪೂರ ಗ್ರಾಮ ಪಂಚಾಯತ್ ದೇವದುರ್ಗ ತಾಲೂಕು ರಾಯಚೂರು ಜಿಲ್ಲೆ

ಸ್ಥಳ: ಅಮರಾಪೂರ

ದಿನಾಂಕ: 08/05/2020

ಅಧ್ಯಕ್ಷರು
ಗ್ರಾ.ಪಂ. ಅಮರಾಪೂರ

<u>ಯಥಾ ಪ್ರತಿ:</u>

* ಮಾನ್ಯ ಸಚಿವರು,ಗ್ರಾಮೀಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,ಕರ್ನಾಟಕ ಸರ್ಕಾರ
* ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ
* ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,ಕರ್ನಾಟಕ ಸರ್ಕಾರ
* ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ,ಕರ್ನಾಟಕ

Scanned with CamScanner

| ಗ್ರಾಮ ಪಂಚಾಯತ್ : ಅಮರಾಪುರ | ತಾಲೂಕು : ದೇವದುರ್ಗ | ಜಿಲ್ಲೆ : ರಾಯಚೂರು |
|---|---|---|

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 1 | ರುಕ್ಕಮ್ಮ ಗಂ.ರಾಮಣ್ಣ | ಅಧ್ಯಕ್ಷರು | ರುಕ್ಮಮ್ಮ |
| 2 | ರಾಮಲಿಂಗಮ್ಮ ಗಂ.ಬಸವರಾಜ | ಉಪಾಧ್ಯಕ್ಷರು | ರಾಮಲಿಂಗಮ್ಮ |
| 3 | ದೇವಿಂದ್ರಪ್ಪ ತಂ.ಮಲ್ಲಯ್ಯ | ಸದಸ್ಯರು | |
| 4 | ಭೀಮರಾಯ ತಂ.ಸಾಬಗೌಡ | ಸದಸ್ಯರು | ಭೀಮರಾಯ |
| 5 | ನಾಗೇಂದ್ರ ತಂ.ಮಾಳಪ್ಪ | ಸದಸ್ಯರು | |
| 6 | ನರಸಮ್ಮ ಗಂ.ರಾಮಣ್ಣ | ಸದಸ್ಯರು | |
| 7 | ಮಲ್ಲಪ್ಪ ತಂ, ಹೊನ್ನಪ್ಪ | ಸದಸ್ಯರು | |
| 8 | ಮಲ್ಲಮ್ಮ ಗಂ.ಶಿವಪ್ಪ | ಸದಸ್ಯರು | ಮಲ್ಲಮ್ಮ |
| 9 | ಕಾಳಮ್ಮ ಗಂ.ಬಸವರಾಜ | ಸದಸ್ಯರು | ಕಾಳಮ್ಮ |
| 10 | ಸಣ್ಣ ಹನುಮಂತಿ ಗಂ.ಹನುಮಂತ | ಸದಸ್ಯರು | ಹನುಮಂತಿ |
| 11 | ಪೋಮಣ್ಣ ತಂ.ಛತ್ರೆಪ್ಪ | ಸದಸ್ಯರು | |
| 12 | ಅಮರೇಗೌಡ ತಂ.ಸಿದ್ದರಾಮನಗೌಡ | ಸದಸ್ಯರು | |
| 13 | ಬಾಲಮ್ಮ ಗಂ.ಹನುಮಂತ್ರಾಯ | ಸದಸ್ಯರು | |
| 14 | ಅಮರಮ್ಮ ಗಂ.ಶಿವಪ್ಪ | ಸದಸ್ಯರು | |
| 15 | ನಾಗಪ್ಪ ತಂ.ರಾಮಣ್ಣ | ಸದಸ್ಯರು | ನಾಗಪ್ಪ |

ರುಕ್ಮಮ್ಮ
ಅಧ್ಯಕ್ಷರು
ಗ್ರಾ.ಪಂ. ಅಮರಾಪುರ

Scanned with CamScanner